159ನೇಲ
(17)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ಮಂಡಿಸಿರುವ ನಿಯಮ-72 ಕ್ಕೆ ಉತ್ತರ**

**ವಿಷಯ:-**

ಸರ್ಕಾರಿ ಪ್ರೌಢಶಾಲೆಗಳಲ್ಲಿ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿಕ್ಷಕರನ್ನು ನೇಮಕಾತಿ ಸಂದರ್ಭದಲ್ಲಿ ನೀಡಿದ್ದ ಮೂಲ ದಾಖಲೆಗಳು ನಕಲಿಯಾಗಿವೆ ಎಂದು 2022-23ನೇ ಸಾಲಿನಲ್ಲಿ ಸುಮಾರು 81 ಜನ ಸಹ ಶಿಕ್ಷಕರನ್ನು ಸೇವೆಯಿಂದ ಅಮಾನತ್ತುಗೊಳಿಸಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ನೇಮಕ ಮಾಡಲಾಗಿದೆ. ಅಮಾನತ್ತುಗೊಂಡಿರುವ ಶಿಕ್ಷಕರಲ್ಲಿ ಹೆಚ್ಚಿನವರು ವಿಜ್ಞಾನ ಮತ್ತು ಗಣಿತ ಶಿಕ್ಷಕರುಗಳೇ ಆಗಿದ್ದಾರೆ. ಇವರನ್ನು ಅಮಾನತ್ತು ಮಾಡಿದ 6 ತಿಂಗಳ ನಂತರ ಶೇಕಡ 75ರಷ್ಟು ವೇತನವನ್ನು ಕಳೆದ 3 ವರ್ಷಗಳಿಂದ ಇದುವರೆಗೂ ವೇತನ ನೀಡಲಾಗುತ್ತಿದ್ದು ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಮೂರುವರೆ ವರ್ಷ ಆದರೂ ಇವರ ತನಿಖೆಯನ್ನು ಪೂರ್ಣಗೊಳಿಸದೆ ಯಾವುದೇ ತೀರ್ಮಾನವನ್ನು ಕೈಗೊಳ್ಳದೆ ಶಿಕ್ಷಣ ಇಲಾಖಾ ಅಧಿಕಾರಿಗಳು ವಿನಾಕಾರಣ ವಿಳಂಬ ಮಾಡಲಾಗುತ್ತಿದ್ದಾರೆ. ಈ ಶಿಕ್ಷಕರುಗಳಿಗೆ ಪ್ರತಿ ತಿಂಗಳು ಮನೆಯಲ್ಲಿ ಕೂರಿಸಿ ಲಕ್ಷಾಂತರ ರೂಪಾಯಿ ಸಂಬಳವನ್ನು ನೀಡುತ್ತಿದ್ದಾರೆ. ಸದರಿ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಶಾಲೆಗಳಲ್ಲಿ ಇವರ ಸ್ಥಳದಲ್ಲಿ ಬೇರೆ ಶಿಕ್ಷಕರನ್ನು ನೇಮಕ ಮಾಡದೆ ವರ್ಗಾವಣೆಯಲ್ಲಿಯು ಹುದ್ದೆ ತುಂಬದೆ ಇರುವುದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತುಂಬಾ ತೊಂದರೆಯಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸುವ ಕಾರಣದಿಂದಾಗಿ ಕೂಡಲೇ ಸದರಿ ಶಿಕ್ಷಕರುಗಳ ಮೇಲೆ ಇರುವ ತನಿಖೆಯನ್ನು ಪೂರ್ಣಗೊಳಿಸಬೇಕೆಂಬ ವಿಷಯವನ್ನು ನಿಯಮ-72ರ ಮೇರೆಗೆ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

2012-13 ಮತ್ತು 2014-15ನೇ ಸಾಲಿನ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2 ಮತ್ತು ದೈಹಿಕ ಶಿಕ್ಷಕರು ಗ್ರೇಡ್-1 ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮವೆಸಗಿರುವ ಆರೋಪಿತ ಶಿಕ್ಷಕರುಗಳಿಗೆ ಶಿಸ್ತು ಪ್ರಾಧಿಕಾರಿಗಳಾದ ಶಾಲಾ ಶಿಕ್ಷಣ ಇಲಾಖೆಯ ಆಯಾ ಜಿಲ್ಲಾ ಉಪ ನಿರ್ದೇಶಕರುಗಳು ಸದರಿ ಶಿಕ್ಷಕರನ್ನು ಅಮಾನತ್ತುಗೊಳಿಸಿರುತ್ತಾರೆ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದ್ದು, ಇಲಾಖಾ ವಿಚಾರಣೆಯು ಚಾಲ್ತಿಯಲ್ಲಿದ್ದು, ಈ ಪ್ರಕರಣದಲ್ಲಿನ ಶಿಕ್ಷಕರುಗಳ ಜಿಲ್ಲಾವಾರು ಅಂಕಿ-ಅಂಶದ ವಿವರ ಈ ಕೆಳಕಂಡಂತಿರುತ್ತದೆ:-

| ಕ್ರ.ಸಂ | ಜಿಲ್ಲೆಯ ಹೆಸರು | ಅಮಾನತ್ತುಗೊಂಡ ಶಿಕ್ಷಕರ ಸಂಖ್ಯೆ |
|---|---|---|
| 1 | ಕೋಲಾರ | 29 |
| 2 | ತುಮಕೂರು | 12 |
| 3 | ಬೆಂಗಳೂರು ದಕ್ಷಿಣ | 7 |
| 4 | ಬೆಂಗಳೂರು ಉತ್ತರ | 1 |

| | | |
|---|---|---|
| 5 | ಬೆಂಗಳೂರು ಗ್ರಾಮಾಂತರ | 2 |
| 6 | ಚಿಕ್ಕಬಳ್ಳಾಪುರ | 9 |
| 7 | ಚಿತ್ರದುರ್ಗ | 7 |
| 8 | ದಾವಣಗೆರೆ | 3 |
| 9 | ಮಧುಗಿರಿ | 6 |
| 10 | ಶಿವಮೊಗ್ಗ | 2 |
| 11 | ರಾಮನಗರ | 1 |
| | **ಒಟ್ಟು** | **79** |

ಜಿಲ್ಲಾವಾರು 79 ಪ್ರಕರಣಗಳ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: LAW 160 LAM 2018 ದಿನಾಂಕ::21.12.2019 ರ ಆದೇಶ ಪತ್ರದಲ್ಲಿರುವ ಕ್ರಮ ಸಂಖ್ಯೆ: 20 ರಲ್ಲಿರುವ ಶ್ರೀ ಎನ್ ನಾರಾಯಣ, ನಿವೃತ್ತ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯಾಗಿ ಆಯಾ ಜಿಲ್ಲೆಯಿಂದ ನೇಮಿಸುವ ಕುರಿತು ಒಮ್ಮತದಿಂದ ತೀರ್ಮಾನಿಸಿ ಎಲ್ಲಾ 79 ಪ್ರಕರಣಗಳಿಗೆ ಇವರನ್ನೇ ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಿ ವಿಚಾರಣೆಯನ್ನು ಒಟ್ಟಾರೆಯಾಗಿ ವರದಿಯನ್ನು ಕನಿಷ್ಠ ಅವಧಿಯೊಳಗೆ ಸಲ್ಲಿಸುವುದಾಗಿ ಮಾನ್ಯ ನಿವೃತ್ತ ನ್ಯಾಯಾಧೀಶರವರಿಗೆ ತಿಳಿಸಲಾಗಿದೆ ಹಾಗೂ ಮಂಡನಾಧಿಕಾರಿಯನ್ನು ಸಹ ನೇಮಿಸಲಾಗಿದೆ.

ಆಯುಕ್ತರ ಕಛೇರಿ ಜ್ಞಾಪನಾ ಪತ್ರ ದಿನಾಂಕ:04-10-2024ರಲ್ಲಿ ಸದರಿ ಶಿಕ್ಷಕರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿರುವುದರಿಂದ, ಮುಂದಿನ ಆದೇಶದವರೆಗೆ ಅಮಾನತ್ತನ್ನು ಮುಂದುವರೆಸಲು ಹಾಗೂ ಸದರಿ ಶಿಕ್ಷಕರುಗಳಿಗೆ ಕೆ.ಸಿ.ಎಸ್.ಆರ್ ನಿಯಮ 98(ಬಿ) (i)(ii) ಮತ್ತು (iii) ರಂತೆ ಶೇಕಡಾ 50 ರಷ್ಟು ಜೀವನಾಧಾರ ಭತ್ಯೆಯನ್ನು ನೀಡಲು ಸೂಚಿಸಲಾಗಿದೆ.

ಸದರಿ ಶಿಕ್ಷಕರುಗಳ ಅಮಾನತ್ತಿನಿಂದ ತೆರವಾಗಿರುವ ಹುದ್ದೆಗಳಿಗೆ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ತಾತ್ಕಾಲಿಕ ಪರ್ಯಾಯ ವ್ಯವಸ್ಥೆ ಮಾಡಿರುತ್ತಾರೆ.

ಪ್ರಸ್ತುತ ನೇಮಕಾತಿಯಲ್ಲಿ ಅಕ್ರಮ ಎಸಗಿರುವ ಶಿಕ್ಷಕರ ವಿರುದ್ಧ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ. 79 ಶಿಕ್ಷಕರುಗಳ ವಿರುದ್ಧದ ಇಲಾಖಾ ವಿಚಾರಣೆಯನ್ನು ಒಬ್ಬರೇ ವಿಚಾರಣಾಧಿಕಾರಿಗಳಿಗೆ ವಹಿಸಿರುವುದರಿಂದ ಈ ಎಲ್ಲಾ ಶಿಕ್ಷಕರುಗಳ ಹಾಗೂ ಸಾಕ್ಷಿಗಳ ವಿಚಾರಣೆ ನಡೆಸಲು ಇನ್ನು ಕಾಲಾವಕಾಶ ಬೇಕಾಗಿರುತ್ತದೆ.

**ಸಂಖ್ಯೆ: ಇಪಿ 256 ಎಸ್‌ಇಎಸ್ 2026**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು**